ಪಿ.ಡಬ್ಲ್ಯೂಃ 1

**<u>ದಿನಾಂಕಃ 31-07-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿಯ ಪರವಾಗಿ ಶ್ರೀ ಎಸ್.ಕೆ.ಎ. ವಕೀಲರಿಂದಃ-</u>**

ಹಾವೇರಿಯಲ್ಲಿ ಎಸ್.ಜಿ. ಹಿರೇಮಠ ಎನ್ನುವ ಹಿರಿಯ ವಕೀಲರ ಪರಿಚಯವಿದೆ. ಅವರದ್ದು ಗಣಜೂರು ಗ್ರಾಮದಲ್ಲಿ ನೀರಾವರಿ ಮತ್ತು ಫಾರ್ಮ್‌ಹೌಸ್ ಇರುವ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಶ್ರೀ ಎಸ್.ಜಿ. ಹಿರೇಮಠ ವಕೀಲರ ಫಾರ್ಮ್‌ಹೌಸ್ ಇರುವ ಜಮೀನಿನ ಮೇಲ್ವಿಚಾರಣೆಯನ್ನು ನನ್ನ ತಂದೆ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ಇನ್ನೊಬ್ಬ ಸಹೋದರ ಸುಭಾಷ್ ಎಸ್.ಜಿ. ಹಿರೇಮಠ ವಕೀಲರ ಜಮೀನಿನಲ್ಲಿ ಕೆಲಸ ಮಾಡಲು ಹೋಗುತ್ತಿದ್ದೆವು ಎಂದರೆ ಸರಿಯಲ್ಲ. ನಮಗೆ ಒಟ್ಟು 24 ಎಕರೆ ಜಮೀನು ಇದ್ದು ಅದರಲ್ಲಿ ನಮ್ಮ ತಂದೆ 12 ಜಮೀನನ್ನು ಮಾರಾಟ ಮಾಡಿದ್ದಾರೆ ಈಗ 12 ಎಕರೆ ಜಮೀನು ನಮಗೆ ಇರುತ್ತದೆ. ನಮಗೆ ಜಮೀನು ಸರ್ವೆ ಸಂಖ್ಯೆ 74/10 ರಲ್ಲಿ 7 ಎಕರೆ 20 ಗುಂಟೆ ದಾವಾ ಆಸ್ತಿಯನ್ನು ಒಳಗೊಂಡು ಹಾಗೂ ಇನ್ನೊಂದು 2 ಎಕರೆ ಚಿಲ್ಲರೆ ಗುಂಟೆ ಜಮೀನು ಮಾತ್ರ ನಮ್ಮ ಮನೆತನಕ್ಕೆ ಇತ್ತು ಎಂದರೆ ಸರಿಯಲ್ಲ ಈಗ ನಮ್ಮ ಮನೆತನಕ್ಕೆ ನಮ್ಮ ತಂದೆಯ ಹೆಸರಿನಲ್ಲಿ 12 ಎಕರೆ ಜಮೀನು ಇರುತ್ತದೆ. ನನ್ನ ತಂದೆ 12 ಎಕರೆ ಜಮೀನನ್ನು ಎಂದು ಮಾರಿದರು ಎಂದು ಇಸವಿಯನ್ನು ನಿಖರವಾಗಿ ಹೇಳಲು ಬರುವುದಿಲ್ಲ. ಆದರೆ ನಾನು ಹುಟ್ಟುವುದಕ್ಕಿಂತ ಮೊದಲೇ ಮಾರಿದ್ದರು. ನನ್ನ ತಂದೆ ನನಗೆ 12 ಎಕರೆ ಮಾರಾಟ ಮಾಡಿದ್ದೇನೆ ಉಳಿದ 12 ಎಕರೆ ಜಮೀನಿನಲ್ಲಿ ಮಾತ್ರ ದುಡಿದು ತಿನ್ನಿರಿ ಎಂದು ಹೇಳಿದ್ದರಿಂದ ಈ ವಿಷಯ ನನಗೆ ಗೊತ್ತಾಯಿತು. 2002 ರಲ್ಲಿ ನನ್ನ ತಂದೆ ಮನೆ ಬಿಟ್ಟು ಹೋದ ನಂತರ ಅವರನ್ನು ಕರೆಯಲು ನಾವು ಪಂಚರ ಜೊತೆ ಹೋಗಿದ್ದೆವು. ನನ್ನ ತಂದೆ ಸುಮಾರು 3-4 ವರ್ಷ ಮನೆ ಬಿಟ್ಟು ಹೋಗಿದ್ದರು. ನನ್ನ ತಂದೆ ಮನೆ ಬಿಟ್ಟು ಹೋಗಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಅವರು ಬಂದು ದೇವಗಿರಿಯಲ್ಲಾಪುರದಲ್ಲಿ ಹೋಗಿಬರುವುದನ್ನು ಮಾಡುತ್ತಿದ್ದರು. ನಮ್ಮ ತಂದೆ ಹಾಗೂ ನಮ್ಮ ನಡುವೆ ಪಾಲು ಆದರ ನಂತರ ನಮ್ಮ ಪಾಲಿಗೆ ಬಂದ ಆಸ್ತಿಯನ್ನು ನಾವು ವಹಿವಾಟು ಮಾಡುತ್ತಿದ್ದೇವೆ. ಮತ್ತು ಪ್ರತಿವಾದಿಯ ಪಾಲಿಗೆ ಬಂದ ಆಸ್ತಿಯನ್ನು

ಅವರು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿ ಗಂಡನ ಮನೆಯಿಂದ ಬಂದ ಆಸ್ತಿಯನ್ನು ಕೂಡ ಅವಳೇ ವಹಿವಾಟು ಮಾಡುತ್ತಿದ್ದಾಳೆ ಎಂದರೆ ಸರಿಯಲ್ಲ. ನಮ್ಮ ಪಾಲಿಗೆ ಬಂದ ಆಸ್ತಿಯಿಂದ ನಮಗೆ ಹಾಗೂ ಪ್ರತಿವಾದಿಯ ಪಾಲಿಗೆ ಬಂದ ಆಸ್ತಿಯಿಂದ ಅವಳಿಗೆ ಸಾಕಷ್ಟು ಆದಾಯವಿದೆ ಎಂದರೆ ಸರಿಯಲ್ಲ. ನಾನು ಇವರ ಮೇಲೆ ಪ್ರಕರಣ ದಾಖಲಿಸಿದಾಗ ಆ ಪ್ರಕರಣದಲ್ಲಿ ನಾನು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿ. ಈ ಹಿಂದಿನ ಪ್ರಕರಣದಲ್ಲಿಯ ಸಾಕ್ಷ್ಯದಲ್ಲಿ ನಮ್ಮ ಕುಟುಂಬಕ್ಕೆ ವ್ಯವಸಾಯದ ಉತ್ಪನ್ನವಿದೆ ಎಂದು ಹೇಳಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ಅದನ್ನು ಬಿಟ್ಟು ಕೂಡ ನನಗೆ ಬೇರೆ ವೈಯಕ್ತಿಕ ಆದಾಯವಿರುತ್ತದೆ. ಪ್ರತಿವಾದಿಗೆ ಈ 1 ಎಕರೆ 22 ಗುಂಟೆ ಜಮೀನಿನಿಂದ ಹಾಗೂ ತನ್ನ ಗಂಡನ ಮನೆಯ ಆಸ್ತಿಯಿಂದ ಸಾಕಷ್ಟು ಉತ್ಪನ್ನ ಬರುತ್ತದೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ಪ್ರತಿವಾದಿಗೆ ವಾರ್ಷಿಕ ಉತ್ಪನ್ನ 20,000/-ರೂ. ಇರುತ್ತದೆ. ಆ ಬಗ್ಗೆ ಲೆಕ್ಕ ಇಟ್ಟಿಲ್ಲ ಆದರೆ ಅವಳು ಪ್ರತಿ ಎಕರೆಗೆ 12,000/-ರೂ. ದಂತೆ ಲಾವಣಿಗೆ ನೀಡಿದ್ದಾಳೆ. ಅವಳ ಗಂಡನ ಮನೆಯ ಆಸ್ತಿಯಿಂದ ಉತ್ಪನ್ನ ಬರುವುದಿಲ್ಲ ಅದು ಅವರ ಮಾವನ ಸ್ವಾಧೀನದಲ್ಲಿದೆ. ಪ್ರತಿವಾದಿಯ ಪರವಾಗಿ ನ್ಯಾಯಾಲಯದ ಡಿಕ್ರಿ ಇದೆ ಹಾಗೂ ಪಹಣಿ ಪತ್ರಿಕೆಯಲ್ಲಿ ಅವಳ ಹೆಸರು ದಾಖಲಾಗಿದೆ ಆದರೂ ಅವರ ಮಾವ ಅವಳಿಗೆ ಅದರ ಸ್ವಾಧೀನವನ್ನು ಕೊಡುವುದಿಲ್ಲ. ಅವಳಿಗೆ ಆ ಆಸ್ತಿಯಿಂದ ಯಾವುದೇ ಉತ್ಪನ್ನವನ್ನು ಕೊಡುವುದಿಲ್ಲ. ಈ ಬಗ್ಗೆ ನನ್ನ ಬಳಿ ಯಾವುದೇ ಆಧಾರವಿರುವುದಿಲ್ಲ. ದಿಃ 31.10.2014 ರಂದು ಪ್ರತಿವಾದಿ ನನ್ನ ಪರವಾಗಿ ಖರೀದಿ ಒಪ್ಪಂದಪತ್ರವನ್ನು ಮಾಡಿಕೊಟ್ಟಿದ್ದಾಳೆ. ಆ ಸಮಯದಲ್ಲಿ ಅವಳು ನನಗೆ ಜೀವನ ನಡೆಸಲು ತೊಂದರೆ ಇದೆ ನಾನು ಸಾಲ ಮಾಡಿದ್ದೇನೆ ಸಾಲಗಾರರು ತೊಂದರೆ ನೀಡುತ್ತಿದ್ದಾರೆ ಆದ್ದರಿಂದ ದಾವಾ ಜಮೀನನ್ನು ಮಾರಾಟ ಮಾಡುತ್ತಿರುವುದಾಗಿ ಹೇಳಿದ್ದಳು. ಪ್ರತಿವಾದಿಗೆ ವಾಸಿಸಲು ಸ್ವತಂತ್ರ್ಯವಾದ ಮನೆ ಇದೆ ಎಂದರೆ ಸರಿ ಪ್ರತಿವಾದಿ ಒಬ್ಬಳೇ ಇದ್ದಾಳೆ ಅವಳನ್ನು ನೋಡುವಾರು ಯಾರು ಇಲ್ಲ ಅವಳಿಗೆ ಆರಾಮವಿರುವುದಿಲ್ಲ ಆದ್ದರಿಂದ ಇವೆಲ್ಲವೂ ಅವಳಿಗೆ ಇರುವ ತೊಂದರೆಗಳಾಗಿವೆ ಈ ಕಾರಣದಿಂದ ಅವಳು ಖರೀದಿ ಒಪ್ಪಂದಪತ್ರವನ್ನು ಮಾಡಿಕೊಟ್ಟಿದ್ದಾಳೆ. ಪ್ರತಿವಾದಿಯನ್ನು ನೋಡಿಕೊಳ್ಳಲು ಇನ್ನೊಬ್ಬ ಅಣ್ಣ ಸುಭಾಷ್ ಇವರು ಇದ್ದು ಅವರು ಪ್ರತಿವಾದಿಯ ಬಗ್ಗೆ ಕಾಳಜಿ ವಹಿಸುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಹಾಗೂ ಸುಭಾಷ್ ಇವರ ನಡುವೆ ಸುಮಾರು ಬಾರಿ ತಂಟೆ-ತಕರಾರು ಬಂದಿರುತ್ತವೆ. ಈ ಹಿಂದಿನ ದಾವೆಯಲ್ಲಿ ನನ್ನ ಅಣ್ಣ ವಿರುದ್ಧ ಪಕ್ಷಗಾರನಾಗಿದ್ದ

ಆದ್ದರಿಂದ ನನ್ನ ಹಾಗೂ ಅವನ ನಡುವೆ ಹಾಗೂ ಪ್ರತಿವಾದಿ ಮತ್ತು ನನ್ನ ಅಣ್ಣನ ನಡುವೆಯೂ ಕೂಡ ಸಂಬಂಧ ಚೆನ್ನಾಗಿರುವುದಿಲ್ಲ. ಪ್ರತಿವಾದಿ ಎಲ್ಲಿ ಸಾಲ ಮಾಡಿದ್ದಾಳೆ ಎಂದು ನಾನು ಅವಳನ್ನು ಕೇಳಿಲ್ಲ. ಪ್ರತಿವಾದಿಯ ಆರೋಗ್ಯ ಚೆನ್ನಾಗಿಲ್ಲ ಎನ್ನುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಈ ವ್ಯವಹಾರ ನಡೆದಾಗ ನನ್ನ ಹಿರಿಯ ಅಣ್ಣ ನಿಂಗಪ್ಪ, ಬಸನಗೌಡ, ವಿಜಯಕುಮಾರ ಜಾವೂರ, ಎನ್.ಎಚ್.ಕಟ್ಟಿ, ಬಸವರಾಜ ಅಣಜಿ ಇವರೆಲ್ಲರೂ ಹಾಜರಿದ್ದರು. ಇವರಲ್ಲಿ ವಿಜಯಕುಮಾರ ಜಾವೂರ ಇವರು ಕುಂದಗೋಳ ತಾಲೂಕಿನ ಪಶುಪತಿಹಾಳದವರು. ಉಳಿದವರು ಹಾವೇರಿ ಹಾಗೂ ದೇವಗಿರಿ ಯಲ್ಲಾಪುರದವರು. ಬಸನಗೌಡ ಇವರು ದೇವಗಿರಿಯಲ್ಲಾಪುರದವರು, ಬಸವರಾಜ ಅಣಜಿ ಇವರು ಹಾವೇರಿಯವರು. ನಾನು ಮತ್ತು ನಿಂಗಪ್ಪ ಏನಾದರೂ ಮಾಡಿ ಪ್ರತಿವಾದಿಯ ಆಸ್ತಿಯನ್ನು ಎತ್ತಿಹಾಕಬೇಕೆಂಬ ಉದ್ದೇಶದಿಂದ ಸುಳ್ಳು ದಾಖಲೆಯನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣದ ವ್ಯವಹಾರಕ್ಕಾಗಿ ನಾವು ಬಸವೇಶ್ವರ ನಗರದಲ್ಲಿರುವ ಮನೆಯಲ್ಲಿ ಕೂಡಿದ್ದೆವು. ಈ ಮೇಲೆ ಹೇಳಿದ ಸಾಕ್ಷಿದಾರರೆಲ್ಲರನ್ನೂ ಪ್ರತಿವಾದಿಯೇ ಕರೆದುಕೊಂಡು ಬಂದಿದ್ದರು. ಪ್ರತಿವಾದಿ ಮನೆಯನ್ನು ಬಿಟ್ಟು ಹೊರಗೆ ಹೋಗದಂತಹ ಹೆಣ್ಣು ಮಗಳು ಎಂದರೆ ಸರಿಯಲ್ಲ. ವ್ಯಾಪಾರದ ಹಣವನ್ನು ಎಲ್ಲಾ ಸಾಕ್ಷಿದಾರರು ಕೂಡಿ ನಿರ್ಧರಿಸುತ್ತಾರೆ. ವ್ಯಾಪಾರ ಮುಗಿದಾಗ ಮುಂಜಾನೆ 8.30-9.00 ಗಂಟೆಯಾಗಿತ್ತು. ಕಾಗದವನ್ನು ತಂದಾಗ ಮುಂಜಾನೆ 10.30-11.00 ಗಂಟೆಯಾಗಿತ್ತು. ಅದನ್ನು ಬರೆದಾಗ ಅಂದಾಜು 12.00-1.00 ಗಂಟೆಯಾಗಿರಬಹುದು. ಆ ಸಮಯದಲ್ಲಿ ಪ್ರತಿವಾದಿ ಶ್ರೀ ಎಂ.ಸಿ.ಭರಮಣ್ಣನವರ ವಕೀಲರನ್ನು ಕರೆದುಕೊಂಡು ಬಂದಿದ್ದರು. ವಕೀಲರು ಕಾಗದವನ್ನು ಗಣಕಯಂತ್ರದಲ್ಲಿ ಬರೆದಿದ್ದಾರೆ ನಮ್ಮ ಮನೆಯಲ್ಲಿ ಆದ ವ್ಯಾಪಾರದ ಮಾತುಕತೆಯಲ್ಲಿ ಶ್ರೀ ಎಂ.ಸಿ.ಭರಮಣ್ಣನವರ ವಕೀಲರು ಹಾಜರಿರಲಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳುತ್ತಿದ್ದು ಮುಂದೂಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಾವೇರಿ.

ಪಿ.ಡಬ್ಲ್ಯೂಃ 1